ಜಾಹೀರಾತು

# ಎಂಡೋಮೆಟ್ರಿಯೋಸಿಸ್

ಅನೇಕ ಮಹಿಳೆಯರು ತಮಗೆ ಮಕ್ಕಳಾಗಿಲ್ಲ ಎಂದು ದೂರು ಹೊತ್ತು ವೈದ್ಯರ ಬಳಿ ಬರುತ್ತಾರೆ. ಮಹಿಳೆಯರು ಹೇಳುವ ಲಕ್ಷಣಗಳಿಂದಲೇ ಅವರಿಗೆ ಏನು ಕಾಯಿಲೆ ಇದೆ ಎನ್ನುವುದು ಗೊತ್ತಾಗುತ್ತದೆ.

“ಋತುಚಕ್ರ ಕ್ರಮಬದ್ಧವಾಗಿಲ್ಲ, ಋತುಚಕ್ರ ಆರಂಭವಾಗುವ 2–3 ದಿನ ಮುಂಚೆಯೇ ನೋವು ಕಾಣಿಸಿಕೊಳ್ಳುತ್ತದೆ. ಋತುಸ್ರಾವ ಕಾಣಿಸಿಕೊಂಡ ಮೊದಲ ದಿನ ವಿಪರೀತ ನೋವು ಸಮಾಗಮ ಸಂದರ್ಭದಲ್ಲಿ ಕೂಡ ನೋವುಂಟಾಗುತ್ತದೆ. ಋತುಸ್ರಾವ ನಿಂತ ತಕ್ಷಣ ನನ್ನ ನೋವೆಲ್ಲ ಹೊರಟುಹೋಗುತ್ತದೆ”. ಎಂದು ಯಾರಾದರೂ ಮಹಿಳೆ ಹೇಳಿದಳೆಂದರೆ, ಆಕೆ ಎಂಡೊ ಮೆಟ್ರಿಯೋಸಿಸ್ ಸಮಸ್ಯೆಯಿಂದ ಬಳಲುತ್ತಿದ್ದಾಳೆ ಎನ್ನುವುದು ವೈದ್ಯರಿಗೆ ಖಚಿತವಾಗುತ್ತದೆ.



### ಏನಿದು ಎಂಡೊಮೆಟ್ರಿಯೋಸಿಸ್?

ಗರ್ಭಕೋಶದಲ್ಲಿ ಪ್ರತಿ ತಿಂಗಳೂ ನಿಗದಿತ ಸಮಯದಲ್ಲಿ ಒಂದು ಪದರ ರೂಪುಗೊಳ್ಳುತ್ತಿರುತ್ತದೆ. ಆ ಸಮಯದಲ್ಲಿ ಅಲ್ಲಿ ಭ್ರೂಣ ಬಂದು ಸೇರದೇ ಇದ್ದರೆ ದೇಹ ಆ ಪದರವನ್ನು ಹೊರಗೆ ರವಾನಿಸುತ್ತದೆ. ಆ ಪದರ ರಕ್ತಸ್ರಾವದ ರೂಪದಲ್ಲಿ ಹೊರಗೆ ಬರುತ್ತದೆ. ಅದನ್ನೇ “ಮುಟ್ಟು” ಎಂದು ನಾವು ಕರೆಯುತ್ತೇವೆ.

ಕೆಲವು ಮಹಿಳೆಯರಿಗೆ ನಿಗದಿತ ಸಮಯದಲ್ಲಿ ಯೋನಿ ಮೂಲಕ ರಕ್ತಸ್ರಾವ ಉಂಟಾಗುವುದಿಲ್ಲ. ಗರ್ಭಕೋಶದ ಹೊರಭಾಗದಲ್ಲಿಯೇ ರಕ್ತಸ್ರಾವ ಉಂಟಾಗುತ್ತದೆ. ಫೆಲೋಪಿಯನ್ ಟ್ಯೂಬ್‌ಗಳ ಮೂಲಕವೂ ಅದು ಹಿಮ್ಮುಖವಾಗಿ ಚಲಿಸಿ ಅವಾಂತರ ಸೃಷ್ಟಿಸುತ್ತದೆ.

ಗರ್ಭಕೋಶದ ಹೊರಭಾಗದಲ್ಲಿ ಉಂಟಾದ ರಕ್ತಸ್ರಾವ ಅಲ್ಲಿಯೇ ಹೆಪ್ಪುಗಟ್ಟುತ್ತದೆ. ಆ ಕಾರಣದಿಂದ ಅಲ್ಲಿನ ಅಂಗಗಳು ಒಂದಕ್ಕೊಂದು ಅಂಟಿಕೊಳ್ಳುತ್ತವೆ. ಜೊತೆಗೆ ವಿಪರೀತ ನೋವು ಕೂಡ ಕಾಣಿಸಿಕೊಳ್ಳುತ್ತದೆ.

### ಪರೀಕ್ಷೆ ಹೇಗೆ?

ಸ್ಕ್ಯಾನ್ ಮೂಲಕ ಎಂಡೊಮೆಟ್ರಿಯೋಸಿಸ್ ಸ್ಥಿತಿಯನ್ನು ಕಂಡುಕೊಳ್ಳಬಹುದು. ಆದರೆ ಲ್ಯಾಪ್ರೋಸ್ಕೋಪಿಯಿಂದ ಗರ್ಭಕೋಶ ಹಾಗೂ ಅದರ ಅಸುಪಾಸು ಏನೇನು ಆಗಿದೆ ಎಂಬುದನ್ನು ಅತ್ಯಂತ ಸ್ಪಷ್ಟವಾಗಿ ತಿಳಿದುಕೊಳ್ಳಬಹುದು.

ಅದಕ್ಕೆ ಯಾವ ರೀತಿಯ ಚಿಕಿತ್ಸೆ ಮಾಡಬೇಕು ಎಂಬುದನ್ನು ಕೂಡ ವೈದ್ಯರು ತಿಳಿದುಕೊಳ್ಳಲು ಲ್ಯಾಪ್ರೋಸ್ಕೋಪಿ ನೆರವಾಗುತ್ತದೆ.

ಗರ್ಭಕೋಶದ ಒಳಭಾಗದಲ್ಲಿ ರಕ್ತ ಹೆಪ್ಪುಗಟ್ಟಿರುವುದು, ಅಂಗಗಳು ಒಂದಕ್ಕೊಂದು ಅಂಟಿಕೊಂಡಿರುವುದು, ಅಂಡನಾಳಗಳು ಹಾನಿಗೊಳಗಾಗಿರುವುದು ಲ್ಯಾಪ್ರೋಸ್ಕೋಪಿಯಿಂದ ತಿಳಿಯುತ್ತದೆ.

### ಬಂಜೆತನಕ್ಕೆ ಹೇಗೆ ಕಾರಣವಾಗುತ್ತದೆ?

ಎಂಡೊಮೆಟ್ರಿಯೋಸಿಸ್ ಸಮಸ್ಯೆ ಇರುವ ಮಹಿಳೆಗೆ ಗರ್ಭಕೋಶದ ಹೊರಭಾಗದಲ್ಲಿಯೇ ರಕ್ತಸ್ರಾವ ಉಂಟಾಗುತ್ತದೆ. ಕೆಲವೊಮ್ಮೆ ಅದು ಅಂಡನಾಳಗಳ ಮೂಲಕವೂ ಹಾಯ್ದು ಅಂಡಕೋಶವನ್ನು ತಲುಪುತ್ತದೆ. ಇವೆಲ್ಲ ಕಾರಣಗಳಿಂದಾಗಿ ಅಂಡನಾಳಗಳು (ಫೆಲೋಪಿಯನ್ ಟ್ಯೂಬ್) ತಮ್ಮ ಕಾರ್ಯಸಾಮರ್ಥ್ಯವನ್ನು ಕಳೆದುಕೊಳ್ಳುತ್ತವೆ. ಅಂಡಾಣು–ವೀರ್ಯಾಣು ಮಿಲನಗೊಳ್ಳಲು ಅಲ್ಲಿ ಸ್ಥಳಾವಕಾಶವೇ ಸಿಗುವುದಿಲ್ಲ. ಅಂಡಕೋಶದಲ್ಲೂ ಅದು ವ್ಯಾಪಿಸಿಕೊಂಡಿದ್ದರೆ, ಅಲ್ಲಿ ರಕ್ತ ಹೆಪ್ಪುಗಟ್ಟಿದ್ದರೆ, ಅಂಡಗಳ ಸಂಖ್ಯೆ ತೀರಾ ಕಡಿಮೆಯಾಗುತ್ತದೆ. ಜೊತೆಗೆ ಅವುಗಳ ಗುಣಮಟ್ಟ ಕೂಡ ಕುಸಿಯುತ್ತದೆ.

### ತಡ ಮಾಡಬೇಡಿ

ಎಂಡೊಮೆಟ್ರಿಯೋಸಿಸ್ ಸಮಸ್ಯೆಯಿಂದ ಬಳಲುವ ಮಹಿಳೆಯರು ಮಗು ಪಡೆಯುವ ಅಪೇಕ್ಷೆಯಿದ್ದರೆ ಬೇಗ ತಮ್ಮ ಅಭಿಲಾಷೆ ಈಡೇರಿಸಿಕೊಳ್ಳಬೇಕು. ತಡಮಾಡಿದಷ್ಟು ಮಗು ಪಡೆಯುವ ಸಾಧ್ಯತೆ ಕ್ಷೀಣವಾಗುತ್ತ ಹೋಗುತ್ತದೆ.

### ತಾಯಂದಿರು ಗಮನಹರಿಸಬೇಕು

**ಸಾಮಾನ್ಯವಾಗಿ ಹೆಣ್ಣುಮಕ್ಕಳು 12 ರಿಂದ 14ನೇ ವಯಸ್ಸಿನಲ್ಲಿ ಋತುಮತಿಯಾಗುತ್ತಾರೆ. ಹೆಣ್ಣುಮಗು ನೋವಿನಿಂದ ಒದ್ದಾಡುತ್ತಿದ್ದರೆ, ಮಾತ್ರೆ ಕೊಟ್ಟಾಗ ಮಾತ್ರ ನೋವು ಕಡಿಮೆಯಾಗುತ್ತಿದ್ದರೆ, ರಕ್ತಸ್ರಾವ ನಿಲ್ಲದೆ ಇದ್ದರೆ ತಾಯಂದಿರು ತಕ್ಷಣವೇ ಜಾಗೃತರಾಗಿ ವೈದ್ಯರ ಬಳಿ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಬೇಕು. ಈ ರೀತಿ ಮುನ್ನೆಚ್ಚರಿಕೆ ವಹಿಸಿದರೆ ಮುಂದಾಗಬಹುದಾದ ತೊಂದರೆಯನ್ನು ತಪ್ಪಿಸಬಹುದು.**

### ಚಿಕಿತ್ಸೆ ಹೇಗೆ?

ಲ್ಯಾಪ್ರೋಸ್ಕೋಪಿ ಪರೀಕ್ಷೆ ಮಾಡುತ್ತಿರುವಾಗ ರಕ್ತ ಹೆಪ್ಪುಗಟ್ಟಿರುವುದನ್ನು ನಿವಾರಿಸಲಾಗುತ್ತದೆ. ಗರ್ಭಕೋಶದ ಅಸುಪಾಸಿನ ಅಂಗಗಳು ಪರಸ್ಪರ ಅಂಟಿಕೊಂಡಿರುವುದನ್ನು ನಿವಾರಿಸಿ ಅವು ಪುನಃ ಅಂಟಿಕೊಳ್ಳದಂತೆ “ಅಬ್ಲೇಷನ್” ಪ್ರಕ್ರಿಯೆ ಅನುಸರಿಸಲಾಗುತ್ತದೆ. ವೀರ್ಯಾಣು–ಅಂಡಾಣು ಮಿಲನಗೊಳ್ಳಲು ಸಹಾಯಕವಾಗುವ ಫೆಲೋಪಿಯನ್ ಟ್ಯೂಬ್ ಬ್ಲಾಕ್ ಆಗಿದ್ದರೆ ಅದನ್ನು ಸರಿಪಡಿಸಿ, ಪುನಃ ಗರ್ಭಧಾರಣೆಗೆ ಸೂಕ್ತವಾಗುವಂತೆ ಮಾಡಲಾಗುತ್ತದೆ. ಗರ್ಭಕೋಶದಲ್ಲಿ ಎಂಡೊಮೆಟ್ರಿಯೋಸಿಸ್ ಚುಕ್ಕೆಗಳಿದ್ದರೆ ಅವನ್ನೆಲ್ಲ ಬರ್ನ್ ಮಾಡಬೇಕಾಗುತ್ತದೆ. ಒಂದು ಸಲ ಅವನ್ನು ಬರ್ನ್ ಮಾಡಿದರೆ ಅವು ಪುನಃ ಕಾಣಿಸಿಕೊಳ್ಳುವುದಿಲ್ಲ.

### ಅಡಿನೋಮಯೋಸಿಸ್

ಕೆಲವು ಮಹಿಳೆಯರಿಗೆ ಗರ್ಭಕೋಶ ವಿಪರೀತ ದಪ್ಪಗಾಗಿರುತ್ತದೆ. ಈ ಕಾರಣದಿಂದ ಅವರು ಅಸಾಧ್ಯ ಸೊಂಟ ನೋವಿನಿಂದ ಬಳಲುತ್ತಿರುತ್ತಾರೆ. ಈ ಸ್ಥಿತಿಯನ್ನು ವೈದ್ಯ ಭಾಷೆಯಲ್ಲಿ ‘ಅಡಿನೋಮ ಯೋಸಿಸ್’ ಎಂದು ಹೇಳುತ್ತಾರೆ.

ಇಂಜೆಕ್ಷನ್ ಮೂಲಕ ದಪ್ಪಗಾಗಿರುವ ಗರ್ಭಕೋಶವನ್ನು ವಾಸ್ತವ ಸ್ಥಿತಿಗೆ ತಂದು ಬಳಿಕ ಚಿಕಿತ್ಸೆ ನೀಡಲಾಗುತ್ತದೆ. ಚುಚ್ಚುಮದ್ದನ್ನು ಲ್ಯಾಪ್ರೋಸ್ಕೋಪಿ ಮೂಲಕ ಪರೀಕ್ಷೆ ಮಾಡುವ ಸಂದರ್ಭದಲ್ಲಿ ಕೊಡಲಾಗುವುದಿಲ್ಲ. ಋತುಚಕ್ರ ಆದ 5ನೇ ದಿನಕ್ಕೆ ಚುಚ್ಚುಮದ್ದು ನೀಡಲಾಗುತ್ತದೆ.

ಗರ್ಭಕೋಶ ದಪ್ಪಗಾದ ಸಂದರ್ಭದಲ್ಲಿ ಅದು ಭ್ರೂಣವನ್ನು ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯವನ್ನು ಕಳೆದುಕೊಂಡಿರುತ್ತದೆ. ಅಂತಹ ಸಂದರ್ಭದಲ್ಲಿ ಗರ್ಭ ನಿಂತರೆ ರಕ್ತಸ್ರಾವವಾಗತ್ತದಲ್ಲದೆ, ಹೊಟ್ಟೆನೋವಿನ ಜೊತೆಗೆ ಗರ್ಭಪಾತವಾಗುತ್ತದೆ.

### ನಿರ್ಲಕ್ಷ್ಯ ತೋರಿದರೆ ಅಪಾಯ

ಕೆಲವು ಮಹಿಳೆಯರು ಮಾತ್ರೆಗಳನ್ನು ನುಂಗುವುದರ ಮೂಲಕ ನೋವನ್ನು ತಾತ್ಕಾಲಿಕವಾಗಿ ಶಮನ ಮಾಡಿಕೊಳ್ಳುತ್ತಾರೆ. ಅದಕ್ಕೆ ಸಕಾಲಕ್ಕೆ ಚಿಕಿತ್ಸೆ ಪಡೆಯದೆ ಹೋದರೆ ಅದು ಮಹಿಳೆಗೆ 'ಫ್ರೋಜನ್ ಫೆಲ್ವಿಸ್' ಎಂಬ ಅಪಾಯಕಾರಿ ಸ್ಥಿತಿಯನ್ನು ತಂದೊಡ್ಡಬಹುದು. ಅಕ್ಕಪಕ್ಕದ ಎಲ್ಲ ಅಂಗಗಳು ಮಂಜುಗಡ್ಡೆ ತರಹ ಅಂಟಿಕೊಂಡು ಶಸ್ತ್ರಚಿಕಿತ್ಸೆ ಕೂಡ ಮಾಡಲಾಗದ ಸ್ಥಿತಿ ಉಂಟಾಗುತ್ತದೆ.

**ಹೆಚ್ಚಿನ ಮಾಹಿತಿ ಮತ್ತು ಚಿಕಿತ್ಸೆಗಾಗಿ “ಗರ್ಭಗುಡಿ” ವೈದ್ಯರನ್ನು ಸಂಪರ್ಕಿಸಿ:**

ಗರ್ಭಗುಡಿ
GarbhaGudi

## GARBHAGUDI IVF CENTRE

**MAIN & REG. OFFICE:** 210/A, 14th Main, 50ft Road, Hanumanthanagar, Bangalore-50. **Mob: +91 988691556**

**Branches at:** HRBR Layout- M:8861433339 Electronic City- M: 8861811116 South End Circle- M: 9972473555

**E-mail: info@garbhagudi.com Web: www.garbhagudi.com Tollfree: 1800-200-8288**